ಇಡೀ ರಾಜ್ಯದಲ್ಲಿ ಶಿಕ್ಷಕರ ಕೊರತೆ ಇರುವ ವಿಷಯವನ್ನು ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಬೇಕೆಂದು ಕೋರಿರುವ ಮೇರೆಗೆ ಈ ಪ್ರಶ್ನೆಯನ್ನು ಬದಲಾವಣೆ ಮಾಡಿ 9ನೇ ತಾರೀಖು ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್: ಧನ್ಯವಾದಗಳು.

ಹುಣಸೂರು ತಾಲ್ಲೂಕಿನಲ್ಲಿ ಸರ್ವೆ ಶಿಕ್ಷಣ ಅಭಿಯಾನ ಯೋಜನೆ

17 (319) **ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ದಯೆಯಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ:–**

ಅ) ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ 2011–12ನೇ ಸಾಲಿಗೆ ಸರ್ಕಾರಿ ಶಾಲೆಗಳಿಗೆ ಹೆಚ್ಚುವರಿ ಮುಖ್ಯ ಶಿಕ್ಷಕರ ಕೊಠಡಿಗಳನ್ನು ಹಂಚಿಕೆ ಮಾಡಿ ಪ್ರಸ್ತಾವನೆ ಸಲ್ಲಿಸಲಾಗಿದ್ದು; ಯಾವ ಆಧಾರದ ಮೇಲೆ ಶಾಲೆಗಳನ್ನು ಆಯ್ಕೆ ಮಾಡಲಾಗಿದೆ (ವಿವರ ಒದಗಿಸುವುದು);

ಆ) ಈ ಪ್ರಕ್ರಿಯೆಯನ್ನು ಸಂಪೂರ್ಣ ಲೋಪದೋಷವಿದ್ದು ಹೆಸರಿಗೆ ಮಾತ್ರ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯನ್ನು ರೂಪಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಪ್ರಸ್ತಾವನೆಯಲ್ಲಿ, ಹುಣಸೂರು ತಾಲ್ಲೂಕಿನ ಕಟ್ಟಡ ಕಟ್ಟಲು ನಿವೇಶನ ಲಭ್ಯವಿಲ್ಲದ 4 ರಿಂದ 5 ಶಾಲೆಗಳು ಹಾಗೂ ಕಟ್ಟಡ ಅವಶ್ಯವಿಲ್ಲದ ಶಾಲೆಗಳ ಪ್ರಸ್ತಾವನೆಯನ್ನು ಸಹ ಪಟ್ಟಿ ಮಾಡಿ ಸಲ್ಲಿಸಲಾಗಿದ್ದು ಇದನ್ನು ತಿದ್ದುಪಡಿ ಮಾಡಲು ಅವಕಾಶವಿದೆಯೇ;

ಈ) ನಿವೇಶನ ಲಭ್ಯವಿಲ್ಲದೇ ಇರುವುದರಿಂದ ಅನುದಾನ ಗತಿಸಿ ಹೋದಲ್ಲಿ ಇದಕ್ಕೆ ಯಾರು ಹೊಣೆ; ಈ ಬಗ್ಗೆ ಸರ್ಕಾರದ ವತಿಯಿಂದ ಏನು ಕ್ರಮಕ್ಕೈಗೊಳ್ಳಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 2011–12ನೇ ಸಾಲಿಗೆ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮುಖ್ಯ ಶಿಕ್ಷಕರ ಹುದ್ದೆ ಮಂಜೂರಾಗಿರುವಂತಹ ಶಾಲೆಗಳಿಗೆ ಮುಖ್ಯ ಶಿಕ್ಷಕರ ಕೊಠಡಿಗಳನ್ನು ಒದಗಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಶಾಲೆಯಲ್ಲಿರುವ ಒಟ್ಟು ತರಗತಿಗಳು ಮತ್ತು ಶಾಲೆಯಲ್ಲಿ ಇರುವ ಒಟ್ಟು ಶಿಕ್ಷಕರ ಸಂಖ್ಯೆಯಲ್ಲಿ

ಯಾವುದು ಕಡಿಮೆಯೋ ಅಷ್ಟು ಕೊಠಡಿಗಳು ಮಾತ್ರ ಶಾಲೆಗೆ ಅನುಮೋದನೆಯಾಗಿರುತ್ತದೆ ಹಾಗೂ ಒಂದು ಮುಖ್ಯೋಪಾಧ್ಯಾಯರ ಕೊಠಡಿ ಮಂಜೂರಾಗಿರುತ್ತದೆ. ಇದನ್ನು ಈ ಮಾನದಂಡದ ಮೇರೆಗೆ 30 ಸೆಪ್ಟೆಂಬರ್ 2010ರ ಡೈಸ್ ಅಂಕಿ ಅಂಶಗಳ ಆಧಾರದ ಮೇರೆಗೆ ಶಾಲೆಗಳನ್ನು ಆಯ್ಕೆ ಮಾಡಲಾಗಿದೆ.

ಆ) ಈ ಪ್ರಕ್ರಿಯೆಯಲ್ಲಿ ಯಾವುದೇ ಲೋಪದೋಷವಿರುವುದಿಲ್ಲ, ಏಕೆಂದರೆ, ತಾಲ್ಲೂಕು ಮಟ್ಟದಲ್ಲಿ ಸಿದ್ಧಪಡಿಸಿದ ಪ್ಲಾನ್ ಡಿಐಸಿಯಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಸಿದ್ಧಪಡಿಸುವ ಪ್ಲಾನ್ ರಾಜ್ಯ ಕಛೇರಿಯಲ್ಲಿ ಅನುಮೋದನೆಯನ್ನು ಪಡೆದು, ನಂತರ ರಾಜ್ಯದಲ್ಲಿ ಕ್ರೋಢೀಕರಿಸಿ ಕೇಂದ್ರಕ್ಕೆ ಅನುಮೋದನೆಗೆ ಸಲ್ಲಿಸಲಾಗುವುದು. ಅನುಮೋದನೆಗೊಂಡ ಪ್ಲಾನ್‌ನ್ನು ಅನುಷ್ಠಾನಗೊಳಿಸುವ ಮುನ್ನ ಮತ್ತೊಮ್ಮೆ ಡಿಐಸಿ(ಜಿಲ್ಲಾ ಅನುಷ್ಠಾನ ಸಮಿತಿ) ಗಮನಕ್ಕೆ ತಂದು ಡೈಸ್ ಅಂಕಿ ಅಂಶಗಳ ಮೇರೆಗೆ ಅವಶ್ಯಕವಿರುವ ಶಾಲೆಗಳಿಗೆ ಮಾತ್ರ ಅನುಮೋದನೆಯನ್ನು ನೀಡಲು ಮತ್ತೊಮ್ಮೆ ಡಿಐಸಿ ಸಭೆಯಲ್ಲಿ ಅನುಮೋದನೆ ಪಡೆಯಲಾಗುತ್ತಿದೆ.

ಇ) ನಿವೇಶನ ಲಭ್ಯವಿಲ್ಲದ ಶಾಲೆಗಳಿಗೆ ಕೊಠಡಿಗಳ ಮಂಜೂರು ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿರುತ್ತದೆ. ಒಂದು ವೇಳೆ ನಿವೇಶನ ಲಭ್ಯವಿಲ್ಲದಿದ್ದರೂ ಪ್ರಸ್ತಾವನೆಯನ್ನು ಸಲ್ಲಿಸಿ ಮಂಜೂರಾಗಿದ್ದಲ್ಲಿ, ಈಗಾಗಲೇ ನಿರ್ಮಿಸಿರುವ ಕಟ್ಟಡದ ಮೇಲೆ–ಕಟ್ಟಲು ಅವಕಾಶವಿದ್ದಲ್ಲಿ ನಿರ್ಮಿಸಬಹುದಾಗಿರುತ್ತದೆ. ಇಲ್ಲದಿದ್ದಲ್ಲಿ, ಇದನ್ನು ಸರ್ಕಾರಕ್ಕೆ ಅದ್ಯಾರ್ಪಣೆ ಮಾಡಬೇಕಾಗಿರುತ್ತದೆ.

ಡಿ.ಐ.ಸಿ.ನಲ್ಲಿ ಬೇರೆ ಶಾಲೆಗೆ ಅವಶ್ಯಕತೆ ಇದ್ದಲ್ಲಿ ಬದಲಾವಣೆಗೆ ಅವಕಾಶ ನೀಡಲಾಗಿದೆ. ಅವಶ್ಯಕತೆ ಇಲ್ಲದಿದ್ದರೆ, ಅದನ್ನು ಕೇಂದ್ರ ಸರ್ಕಾರಕ್ಕೆ ಹಿಂದಿರುಗಿ ನೀಡಬೇಕಾಗಿರುತ್ತದೆ.

ಈ) ನಿವೇಶನ ಲಭ್ಯವಿಲ್ಲದೇ ಇರುವುದರಿಂದ ಅನುದಾನ ಗತಿಸಿ ಹೋಗದಂತೆ ತಡೆಯುವುದು ಶಾಲಾ ವ್ಯಾಪ್ತಿಯಲ್ಲಿ ಬರುವ ಎಸ್.ಡಿ.ಎಂ.ಸಿ. ಗ್ರಾಮ ಪಂಚಾಯತಿ ಹಾಗೂ ಜನಪ್ರತಿನಿಧಿಗಳು ಶಾಲೆಗೆ ನಿವೇಶನವನ್ನು ಒದಗಿಸಿಕೊಡಲು ಪ್ರಯತ್ನಿಸಬೇಕು. ಶಾಲೆಗೆ ಸರ್ಕಾರದ ವತಿಯಿಂದ ನಿವೇಶನವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಒದಗಿಸಿಕೊಡಲು ಇಲಾಖೆಯ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ.

ಶ್ರೀ ಹೆಚ್.ಪಿ. ಮಂಜುನಾಥ್: ಮಾನ್ಯ ಅಧ್ಯಕ್ಷರೆ, ನಾವು ಕೇಳಿದಂತಹ ಪ್ರಶ್ನೆಗೆ ಉತ್ತರ ಬಂದಿದೆ. ಇಲ್ಲಿ ಮುಖ್ಯವಾಗಿ ನಾವು ಯೋಚನೆ ಮಾಡಬೇಕಾಗಿರುವಂಥದ್ದು ಏನು ಇವರು ಡೈಸ್ ಒಂದು ಅಂಕಿ ಅಂಶದ ಪ್ರಕಾರ ಮಾಡಿದ್ದಾರೆ, ನಮ್ಮ BIC ಸಮಿತಿ ಮುಖಾಂತರವೂ ಶಿಫಾರಸ್ಸು ಆಗಿ ಹೋಗಿರುತ್ತದೆ. ಆದರೆ ಡೈಸ್‌ನಿಂದ ಬಂದಿರುವಂತಹವರು ಬರೀ information ತೆಗೆದುಕೊಂಡಿರುತ್ತಾರೆ. Ground reality ನೋಡಿರುವುದಿಲ್ಲ. ಇವರು ಒಂದು ಅಂಕಿ ಅಂಶದ ಪ್ರಕಾರ ಶಾಲಾ ಮಕ್ಕಳು ಎಷ್ಟಿದ್ದಾರೆ, ಶಿಕ್ಷಕರು ಎಷ್ಟಿದ್ದಾರೆಂದು ಯೋಚನೆ ಮಾಡಿ ಒಂದು ಕಡೆ ಕಛೇರಿಯಲ್ಲಿ ಕುಳಿತು ಇಂತಿಂತಹ ಊರಿಗೆ ಇಷ್ಟಿಷ್ಟು ಎಂದು ಅವರು ಸ್ಯಾಂಕ್ಷನ್ ಮಾಡುತ್ತಾರೆ. ಉದಾಹರಣೆಗೆ ಹುಣಸೂರಿನಲ್ಲಿ ಎಂಟು ಮುಖ್ಯ ಶಿಕ್ಷಕರ ಕೊಠಡಿಗಳು ಹಾಗೂ ಶಾಲಾ ಕೊಠಡಿಗಳು ಬಂದಿದ್ದವು. ಇದರಲ್ಲಿ ಅರ್ಧಕ್ಕರ್ಧ ಜಾಗ ಇಲ್ಲವೆಂದು ರಿಜೆಕ್ಟ್ ಮಾಡಿದ್ದಾರೆ. ಇದಕ್ಕೆ ಯಾರು ಜವಾಬ್ದಾರರಾಗುತ್ತಾರೆ? ಮೈಸೂರು ಜಿಲ್ಲೆಯಲ್ಲಿ ಕೂಡ 57 ಕೊಠಡಿಗಳು ಒಟ್ಟು 36 ಶಾಲಾ ಕೊಠಡಿಗಳು ವಾಪಸ್ ಹೋಗುತ್ತಿವೆ.

ಅಧ್ಯಕ್ಷರು: ತಾವು ಕೇಳಿದ್ದೀರಿ ಅವರು ಉತ್ತರ ಹೇಳಲಿ.

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಹುಣಸೂರು ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಮಂಜುನಾಥ್‌ರವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಮುಖ್ಯ ಶಿಕ್ಷಕರಾಗಿ ಕೊಠಡಿಗಳನ್ನು Dias figures ಆಧಾರದ ಮೇಲೆ ಮಂಜೂರು ಮಾಡಿದ್ದೇವೆ. ಒಂದೊಂದು ತಾಲ್ಲೂಕಿಗೆ Dias ಅಂಕಿ ಸಂಖ್ಯೆಗಳ ಪ್ರಕಾರ ಹೆಚ್ಚು ಕೊಠಡಿಗಳು ಬೇಕಾಗಬಹುದು. ಆದರೆ, ಒಟ್ಟಾರೆ ರಾಜ್ಯಕ್ಕೆ ಕೊಟ್ಟಿರುವ ಕೊಠಡಿಗಳ/ಪೈಕಿ 2–3 ಶಾಲೆಗಳಿಗೆ ಕೊಟ್ಟಿರಬಹುದು, ಇನ್ನು 2–3 ಶಾಲೆಗಳಿಗೆ ಕೊಟ್ಟಿಲ್ಲದೆಯೇ ಇರಬಹುದು. ಈ ವ್ಯತ್ಯಾಸ ಏಕಾಗಿದೆಯೆಂದರೆ, ನಮಗೆ ಇರುವ ಒಟ್ಟು target ನಲ್ಲಿ ಹಂಚಿಕೆ ಮಾಡುವ ಸಂದರ್ಭದಲ್ಲಿ ಒಂದೇ ವರ್ಷದಲ್ಲಿ ಎಲ್ಲಾ ಸ್ಥಳಗಳಲ್ಲಿಯೂ ಎಲ್ಲಾ ಹೈಸ್ಕೂಲ್‌ಗಳ ಮುಖ್ಯ ಶಿಕ್ಷಕರಿಗೆ ಹೆಚ್ಚುವರಿ ಕೊಠಡಿಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ, ಹಂತ ಹಂತವಾಗಿ ಸರ್ವ ಶಿಕ್ಷಣ ಯೋಜನೆಯಡಿಯಲ್ಲಿ ಎಲ್ಲ ಕಡೆಯಲ್ಲಿಯೂ ಸಹ ಹೆಚ್ಚುವರಿಯಾಗಿ ಮುಖ್ಯ ಶಿಕ್ಷಕರ ಕೊಠಡಿಯನ್ನು ಮಂಜೂರು ಮಾಡುವ ಸಿದ್ಧತೆಯನ್ನು ಮಾಡಿಕೊಂಡಿದ್ದು, ಯೋಜನೆ ಸಹ ಸಿದ್ಧಪಡಿಸಿಕೊಂಡಿದ್ದೇವೆ. ಈ ಸಂದರ್ಭದಲ್ಲಿ ಈ ಸದನದ ಮೂಲಕ ನಮ್ಮ ಇಲಾಖೆಯ

ಅಧಿಕಾರಿಗಳಿಗೆ ಸೂಚನೆಯನ್ನು ಮತ್ತು ನಿಮ್ಮೆಲ್ಲರಿಗೂ ಒಂದು ಭರವಸೆಯನ್ನು ಕೊಡಬಯಸುತ್ತೇನೆ. ಏನೆಂದರೆ, ಎಲ್ಲೆಲ್ಲಿ ಹೆಚ್ಚುವರಿ ಮುಖ್ಯ ಶಿಕ್ಷಕರ ಕೊಠಡಿಗಳು ಮಂಜೂರಾಗಿವೆಯೋ ಅಲ್ಲಿ ಸ್ಥಳ ಇಲ್ಲವೆನ್ನುವ ಕಾರಣದಿಂದ ವಾಪಸ್ಸು ತೆಗೆದುಕೊಳ್ಳುವುದನ್ನು ತಡೆ ಹಿಡಿಯುವುದಕ್ಕೆ ಹೇಳಿದ್ದೇನೆ. ಈಗಾಗಲೇ ಎಲ್ಲಿ ಕೊಠಡಿಗಳಿವೆಯೋ ಅದರ ಮೇಲೆ ಬೇಕಾದರೆ ಕಟ್ಟಿಕೊಳ್ಳಬಹುದು ಎನ್ನುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಅಂದರೆ ಈಗ ಕೊಠಡಿಗಳಿವೆ ಸ್ಥಳ ಇಲ್ಲ ಅಂಥ ಸಂದರ್ಭದಲ್ಲಿ ಇರುವ ಕೊಠಡಿಯ ಮೊದಲನೇ ಹಂತದಲ್ಲಿ first floor ಎಂದು ಕಟ್ಟಿಕೊಳ್ಳಬಹುದು. ಆ ರೀತಿಯ ಮೊದಲನೇ ಮಹಡಿಗೆ ಅವಕಾಶ ಮಾಡಕೊಟ್ಟಿದ್ದೇವೆ. ಅದಕಾರಣ, ಈಗಾಗಲೇ ಮಂಜೂರಾಗಿರುವ ಮುಖ್ಯ ಶಿಕ್ಷಕರ ಕೊಠಡಿಗಳನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲ. ಸ್ಥಳವಿಲ್ಲವೆಂದರೆ ಮೊದಲನೇ ಮಹಡಿಯಲ್ಲಿ ಕಟ್ಟಿಕೊಳ್ಳಬಹುದು. ಉಳಿದಂತೆ ಎಲ್ಲೆಲ್ಲಿ ಮೊದಲನೇ ಮಹಡಿಯಲ್ಲೂ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೀರೋ, ಅಂಥ ಕಡೆ ಸಮಿತಿಯ ಅಧ್ಯಕ್ಷರಾಗಿರುವ ನಮ್ಮೆಲ್ಲಾ ಮಾನ್ಯ ಶಾಸಕರುಗಳಲ್ಲಿ ನನ್ನ ವಿನಂತಿ ಏನೆಂದರೆ, ನೀವುಗಳು ಕೊಠಡಿಗೆ ಸ್ಥಳವನ್ನು ಹುಡುಕಿ ಕೊಡಿ. ನಿಶ್ಚಿತವಾಗಿ ತಾವು ಹುಡುಕಿಕೊಡುವ ಸ್ಥಳದಲ್ಲೇ ಕೊಠಡಿಯನ್ನು ನಿರ್ಮಿಸಲು ಅವಕಾಶ ಕೊಡಲು ನಾವು ಸಿದ್ಧರಿದ್ದೇವೆ. ಹೆಚ್ಚುವರಿ ಕೊಠಡಿಯ ಪ್ರಸ್ತಾವನೆಯನ್ನು ರದ್ದು ಮಾಡುವುದಿಲ್ಲ. ಮೊದಲನೇ ಮಹಡಿಯಲ್ಲಿ ಕಟ್ಟಿಕೊಳ್ಳುವುದಕ್ಕೆ ಅನುಮತಿ ನೀಡಲು ಸಿದ್ಧರಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ(ಶಿರಾ): ಮಾನ್ಯ ಅಧ್ಯಕರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಕೊಠಡಿಯ ಮೇಲೆ first floor ಕಟ್ಟುವುದಕ್ಕೆ ಅವಕಾಶವಿದೆ ಕಟ್ಟಬಹುದು ಎಂದು ಹೇಳಿದ್ದಾರೆ. ಆದರೆ, ಉತ್ತರ ಕೊಡಬೇಕಾದಾಗ, ಕಟ್ಟುವುದಕ್ಕೆ ಆಗದೇ ಇರುವ ಸಂದರ್ಭದಲ್ಲಿ ಅಧ್ಯಾರ್ಪಣೆ ಮಾಡುತ್ತೇವೆ ಎನ್ನುವಂಥ ಉತ್ತರವನ್ನು ಏಕೆ ಕೊಟ್ಟಿದ್ದಾರೆ? ಸ್ಥಳ ಇಲ್ಲದೇ ಇರುವುದನ್ನು ನೀವು ಗುರುತಿಸುವುದು ತಪ್ಪು ಎನ್ನುವಂಥ ಅಂಶ. ಏಕೆಂದರೆ, ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಕೊಡುವಂಥ ಕಟ್ಟಡಗಳ ಬಗ್ಗೆ ಯಾವ ಶಾಸಕರ ಗಮನಕ್ಕೂ ಬರುವುದಿಲ್ಲ. ತಾವು ಕ್ರಿಯಾ ಯೋಜನೆಯನ್ನು ತಯಾರಿಸುವ ಸಂದರ್ಭದಲ್ಲಿ ಅಗತ್ಯತೆ ಇದೆಯೋ? ಅಥವಾ ಇಲ್ಲವೋ? ಎನ್ನುವುದನ್ನು ಪರಿಶೀಲನೆ ಮಾಡುವುದಿಲ್ಲ. It is only a matter between the Department and the SDMC. ಇವತ್ತು 5 ಮಕ್ಕಳು ಇರುವಂಥ ಶಾಲೆಗಳನ್ನು ಮುಚ್ಚಬೇಕೇ ಅಥವಾ ಭೇಡವೇ ಎನ್ನುವುದರ

ಬಗ್ಗೆ ದೊಡ್ಡ ವಿವಾದ ಆಗಿದೆ. ಇಲ್ಲಿ ಪ್ರಶ್ನೆ ಬಂದಿರುವುದು ರೂ. 10 ಲಕ್ಷ ರೂ. 12 ಲಕ್ಷಗಳ ವೆಚ್ಚದಲ್ಲಿ Infrastructure create ಮಾಡಿ, ಇಂದು ಮುಚ್ಚುವಂಥ ಪರಿಸ್ಥಿತಿ ಬಂದೊದಗಿದೆ. ಇದನ್ನು ತಡೆಯುವುದಕ್ಕಾಗಿ ಮೊದಲೇ ಶಾಸಕರ ಅಧ್ಯಕ್ಷತೆಯಲ್ಲಿ ಕಡ್ಡಾಯವಾಗಿ ಸಮಿತಿ ಕರೆದು, approval ತೆಗೆದುಕೊಂಡು ನಿರ್ವಹಿಸಿದ್ದರೆ ಬಹುಶ: ಇಂಥ ಸಮಸ್ಯೆ ಉದ್ಭವಿಸುತ್ತಿರಲಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾದಾಗ ಕೇಂದ್ರ ಸರ್ಕಾರಕ್ಕೆ ವಾಪಸ್ಸು ಅಧ್ಯಾರ್ಪಣೆ ಮಾಡುತ್ತೇವೆ ಎನ್ನುವಂಥ ಶಬ್ಧಗಳನ್ನು ದಯವಿಟ್ಟು ಉಪಯೋಗಿಸಬೇಡಿ. ತಪ್ಪು ನಿಮ್ಮಿಂದಲೇ ಆಗಿದೆ, ಅದನ್ನು ಒಪ್ಪಿಕೊಂಡು ಸರಿಪಡಿಸಿ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ): ನಮ್ಮ ಶ್ರವಣಬೆಳಗೊಳ ಕ್ಷೇತ್ರದಲ್ಲಿ ಕೆಲವು ಕಡೆ ಹೈಸ್ಕೂಲ್‌ಗಳಿವೆ, ಕನಿಷ್ಠ ಕೊಠಡಿಗಳು ಸಹ ಇಲ್ಲ. ತಮ್ಮಿಂಗಲ ಎಂಬ ಗ್ರಾಮದಲ್ಲಿ ಶಾಲೆ ಪ್ರಾರಂಭವಾಗಿ 20 ವರ್ಷಗಳು ಕಳೆದಿವೆ. ಪ್ರಾರಂಭವಾದಾಗ 3 ಕೊಠಡಿಗಳನ್ನು ಕೊಡಲಾಗಿದ್ದು, ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಮಕ್ಕಳು ಕುಳಿತುಕೊಳ್ಳುವುದಕ್ಕೆ ಜಾಗವಿಲ್ಲದಂತಾಗಿದೆ. ದಯಮಾಡಿ ಇಂಥ ಸ್ಥಳಗಳ ಕಡೆಗೆ ಗಮನಕೊಟ್ಟು ಅವಶ್ಯಕತೆ ಇರುವ ಕಡೆ ಕೊಠಡಿಗಳನ್ನು ಮಂಜೂರು ಮಾಡಿ ಕೊಡಬೇಕು.

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ: ಜೂನಿಯರ್ ಕಾಲೇಜ್‌ಗಳ ಕಟ್ಟಡಗಳ ಬೇಡಿಕೆ ಇರುವುದು ನಮ್ಮೆಲ್ಲರ ಹಾಗೂ ನನ್ನ ಗಮನದಲ್ಲಿಯೂ ಸಹ ಇದೆ. ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಯೋಜನೆ ಅಥವಾ ಸರ್ಕಾರದ ವಿಶೇಷ ಅನುದಾನದಡಿ ಕಟ್ಟಡಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ): ನನ್ನ ಕ್ಷೇತ್ರದ ಆಲೂರು ಗ್ರಾಮದಲ್ಲಿನ ಹೈಸ್ಕೂಲ್‌ನಲ್ಲಿ ಸುಮಾರು 820 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದರೆ ಕೇವಲ 6 ಕೊಠಡಿಗಳು ಮಾತ್ರ ಇದೆ. ಇವುಗಳ ಬಗ್ಗೆ ಹೆಚ್ಚು ಗಮನ ನೀಡಿ, ಕಡಿಮೆ ಕೊಠಡಿಗಳಿರುವುದು ಒಂದು ಸಮಸ್ಯೆಯಾದರೆ, ಹೆಚ್ಚು ಮಕ್ಕಳು ಎಲ್ಲಿದ್ದಾರೋ? ಅಂಥ ಕಡೆ ಹೆಚ್ಚು ಕೊಠಡಿಗಳನ್ನು ಕೊಡಿ.

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ: ಮಾನ್ಯ ಸದಸ್ಯರುಗಳ ಭಾವನೆಗಳು, ಅಭಿಪ್ರಾಯಗಳು, ಅಭಿಪ್ರಾಯಗಳ ಹಿನ್ನೆಲೆಯಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿ ಇರುವ ಸಮಿತಿಯಲ್ಲಿ ಸರ್ವ ಶಿಕ್ಷಣ ಅಭಿಯಾನ

ಯೋಜನೆಗಳ ಕ್ರಿಯಾ ಯೋಜನೆಯನ್ನು ಮಂಜೂರಿ ಮಾಡಲಾಗುತ್ತದೆ. ಇದಾದ ನಂತರ ಮಾನ್ಯ ಜಿಲ್ಲಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಇದೆ. ಎಲ್ಲ ಕಡೆಯೂ ಮಾನ್ಯ ಶಾಸಕರುಗಳು ನಡೆಸಿಕೊಟ್ಟಿದ್ದಾರೆ. ಅಂಕಿ ಸಂಖ್ಯೆಗಳ ವಿವರಗಳನ್ನು ತೆಗೆದುಕೊಂಡಿದ್ದೇನೆ. ತಾವುಗಳೇ ಸರ್ವ ಶಿಕ್ಷಣ ಅಭಿಯಾನ ಕ್ರಿಯಾ ಸಮಿತಿಯಲ್ಲಿ ಮಂಜೂರು ಮಾಡಿ ಕೊಟ್ಟಿದ್ದೀರಿ. ನಿಮ್ಮಗಳ ಗಮನಕ್ಕೆ ಬಾರದೇ ಏನೂ ಆಗಿಲ್ಲ. ನಾನು ಸಹ ಶಾಸಕನಾಗಿ ನಮ್ಮ ತಾಲ್ಲೂಕಿನಲ್ಲಿ ನಿಮ್ಮ ರೀತಿಯಲ್ಲೇ ನೋಡುತ್ತೇನೆ. ನನ್ನ ತಾಲ್ಲೂಕಿನ 6 ಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಕೊಠಡಿಗಳ ಅಗತ್ಯತೆ ಇದೆ. ಆದರೆ, ನಮ್ಮ ತಾಲ್ಲೂಕಿಗೆ ಬರುವುದು ಕೇವಲ 3 ಶಾಲೆಗಳಿಗೆ ಆ ಮೂರನ್ನು ಎಲ್ಲಿ ಕೊಡಬೇಕು ಎನ್ನುವುದು ನಮ್ಮ ಮುಂದೆ ಇರುತ್ತದೆ. ಎಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿದೆಯೋ ಅಲ್ಲಿಗೆ ಕೊಠಡಿಯನ್ನು ಗುರುತು ಮಾಡಿರುತ್ತಾರೆ. ಆದರೆ ನಮಗೆ ಇನ್ನೊಂದು ಕಡೆ ಕೊಟ್ಟರೆ ಒಳ್ಳೆಯದು ಅಂತ ಇರುತ್ತದೆ. ಇದನ್ನು ಬದಲಿ ಮಾಡುವ ವಿಷಯದಲ್ಲಿ ಪ್ರಶ್ನೆ ಇದೆ. ಅದಕ್ಕಾಗಿ Dias ನಲ್ಲಿ ಕ್ರಿಯಾ ಯೋಜನೆ ಮಂಜೂರು ಮಾಡುವಾಗ ತಾವು ಮಾಡಬಹುದು ಎನ್ನುವುದನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅಲ್ಲಿ ತಮ್ಮ ಎದುರುಗಡೆಯೇ ಮಂಜೂರಾಗಿತ್ತದೆ. ಕೇಂದ್ರ ಸರ್ಕಾರ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಹಣವನ್ನು ಕೊಡುವಾಗ ಯಾವ ಯಾವುದಕ್ಕೆ ಎಷ್ಟೆಷ್ಟು ಹಣ ನಿಗದಿಮಾಡಿರುತ್ತದೆಯೋ ನಾವು ಅದನ್ನು ಮೀರಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. Civil component, training component ಗಳಿಗೆ ಇಂತಿಷ್ಟು ಹಣ, ಬೇರೆ ಬೇರೆ component ಗಳಿಗೆಇಷ್ಟಿಷ್ಟು ಹಣ ಎಂದು ಇದೆ. ಅದರೊಳಗೆ ಸ್ವಲ್ಪ ಸಡಿಲತೆ ಬೇಕು ಎಂದು ದೇಶದ ಎಲ್ಲ ರಾಜ್ಯಗಳು ಕೇಂದ್ರ ಸರ್ಕಾರವನ್ನು ಕೇಳುತ್ತಿವೆ. ಒಂದೊಂದು component ಗಳಿಗೆ saturate ಆದಾಗ ಬೇಡಿಕೆಗಳು ಈಡೇರುವಂಥ ಸಂದರ್ಭದಲ್ಲಿ ಅದನ್ನು ಪರಿಹರಿಸುವುದಕ್ಕೆ ಅವಕಾಶಗಳು ಬೇಕು ಎನ್ನುವುದು ನಮ್ಮ ಅಪೇಕ್ಷೆ ಇದೆ. ಅದನ್ನು ಸಹ ಕೇಂದ್ರ ಸರ್ಕಾರಕ್ಕೆ ಎಲ್ಲಾ ರಾಜ್ಯಗಳು ಹೇಳುತ್ತಿವೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ತಮ್ಮ ಅಧ್ಯಕ್ಷತೆಯಲ್ಲಿ ಇರುವ ಸಮಿತಿಯಲ್ಲಿ ತಾವು ಕೂಲಂಕಷವಾಗಿ ಚರ್ಚಿಸಿ, ಅಗತ್ಯವಿರುವ ಕಡೆಗೆ ಆದ್ಯತೆ ಕೊಟ್ಟು ಕೆಲಸ ಮಾಡಿದರೆ ನಿಶ್ಚಿತವಾಗಿ ಅನುಕೂಲವಾಗುತ್ತದೆ ಎನ್ನುವ ವಿಶ್ವಾಸವಿದೆ.

Sri T.B. Jaya Chandra: It is mandatory compulsory ಮಾಡಬೇಕೆಂದು ಹೇಳಿ, ಬಹಳಷ್ಟು ಜನ consult ಮಾಡುವುದಿಲ್ಲ.

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ: ಎಲ್ಲಾ ಕಡೆಯೂ ಸಮಿತಿಯಲ್ಲಿ ಮಾಡಿರುವ ಬಗ್ಗೆ ನ್ನ ಬಳಿ ಅಂಕಿ ಸಂಖ್ಯೆಯಿದೆ. ಮತ್ತೊಮ್ಮೆ ತಮ್ಮ ಕ್ಷೇತ್ರವನ್ನೊಳಗೊಂಡಂತೆ ಪರಿಶೀಲಿಸುತ್ತೇನೆ.

ಅಮೃತ ಮಹಲ್ ಕಾವಲ್ ಜಮೀನನ್ನು ಉದ್ದೇಶಿಸಿ ಯೋಜನೆಗೆ ಬಳಕೆ

18 (303) ಡಾ: ವಿಶ್ವನಾಥ್ ವೈ.ಸಿ. (ಕಡೂರು) ಮಾನ್ಯ ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:–

ಅ) ಕಡೂರು ತಾಲ್ಲೂಕು ವ್ಯಾಪ್ತಿಯಲ್ಲಿರುವ ಅಮೃತ ಮಹಲ್ ಜಮೀನಿನ ವಿಸ್ತೀರ್ಣ ಎಷ್ಟು;

ಆ) ಸಂಬಂಧಪಟ್ಟ ಇಲಾಖೆಯಿಂದ ಈ ಜಮೀನನ್ನು ಉದ್ದೇಶಿತ ಯೋಜನೆಗೆ ಉಪಯೋಗಿಸಿಕೊಳ್ಳಲಾಗುತ್ತಿದೆಯೇ: ಈ ಪ್ರದೇಶದ ಜಮೀನನ್ನು ಅಳತೆ ಮೂಲಕ ಗುರುತಿಸಿ ವಿಸ್ತೀರ್ಣವನ್ನು ಇಲಾಖೆಯವರು ನಿಗದಿಪಡಿಸಿಕೊಂಡಿರುತ್ತಾರೆಯೇ;

ಇ) ಇತ್ತೀಚಿನ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಈ ಪ್ರದೇಶವನ್ನು ಉಪಯೋಗಿಸಿ ಕೊಳ್ಳಲಾಗಿದೆಯೇ;

ಈ) ಈ ಪ್ರದೇಶಗಳ ಜಮೀನು ಒತ್ತುವರಿ ಆಗಿದೆಯೇ:

ಉ) ದೀರ್ಘಾವಧಿ ಕಾಲದಿಂದ ಒತ್ತುವರಿ ಮಾಡುತ್ತಿದ್ದಲ್ಲಿ, ಸಕ್ರಮಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಊ) ಕಡೂರು ತಾಲ್ಲೂಕಿನ ಬಾಸೂರು ಕಾವಲು ಜಮೀನಿನನಲ್ಲಿ ವನ್ಯ ಜೀವಿಗಳು ಮತ್ತು ಪಕ್ಷಿಗಳ ಗಣತಿ ಕಾರ್ಯ ನಡೆಸಲಾಗಿದೆಯೇ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ವ್ಯಾಪ್ತಿಯಲ್ಲಿ 7 ಅಮೃತ್ ಮಹಲ್ ಕಾವಲುಗಳಿದ್ದು, ಅರ್.ಟಿ.ಸಿ. ರೀತ್ಯಾ ಅವುಗಳ ಒಟ್ಟು ಮಿಸ್ತೀರ್ಣ 10,308.36 ಎಕರೆಗಳಾಗಿರುತ್ತದೆ.